ಗೋದಾವರಿ ನದಿ ನೀರು ದಿಕ್ಕು ಬದಲಾವಣೆ ಮಾಡುವುದು

45 (121) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋದಾವರಿ ನದಿ ದಿಕ್ಕು ಬದಲಾವಣೆ ಅನ್ವಯ ಕರ್ನಾಟಕ, ಮಹಾರಾಷ್ಟ್ರ ಹಾಗೂ ಆಂಧ್ರ ರಾಜ್ಯಗಳಿಗೆ ದೊರೆತ ನೀರಿನ ಪ್ರಮಾಣ ಎಷ್ಟು;

ಆ) ಮುಳವಾಡ ಏತ ನೀರಾವರಿ ಹಾಗೂ ಹಿಪ್ಪರಗಿ ಯೋಜನೆಯಲ್ಲಿ ಅವಕಾಶ ವಂಚಿತವಾದ ಜಮಖಂಡಿ ತಾಲ್ಲೂಕಿನ ಸಾವಳಗಿ ಭಾಗದ ಜಮೀನುಗಳಿಗೆ ಗೋದಾವರಿ ನದಿ ದಿಕ್ಕು ಬದಲಾವಣೆಯಿಂದಾಗಿ ಎಷ್ಟು ಟಿ.ಎಂ.ಸಿ. ನೀರನ್ನು ಕೊಡಲು ಸರ್ಕಾರ ಬದ್ದವಿದೆ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಆಂಧ್ರಪ್ರದೇಶ ರಾಜ್ಯದ ಇಂದಿರಾ ಸಾಗರ ಪೊಲ್ಲಾವರಂ ಯೋಜನೆಯಡಿ ಒಟ್ಟು 80.00 ಟಿಎಂಸಿ ನೀರನ್ನು ಕೃಷ್ಣಾ ನದಿಗೆ ತಿರುವು ಗೊಳಿಸಲಾಗುತ್ತಿದೆ. ಆಂಧ್ರಪ್ರದೇಶ 45.00 ಟಿಎಂಸಿ, ಕರ್ನಾಟಕ ಮತ್ತು ಮಹಾರಾಷ್ಟ್ರ ಕ್ರಮವಾಗಿ 21.00 ಟಿಎಂಸಿ ಹಾಗೂ 14.00 ಟಿಎಂಸಿ ನೀರನ್ನು ಉಪಯೋಗಿಸಬಹುದಾಗಿದೆ.

ಆ) ಕರ್ನಾಟಕಕ್ಕೆ ಲಭಿಸಿರುವ ನೀರನ್ನು ವಿವಿಧ ಉದ್ದೇಶಕ್ಕೆ ಬಳಸಿಕೊಳ್ಳುವ ಬಗ್ಗೆ ಪರಿಶೀಲಿಸಲು ಸರ್ಕಾರ ದಿನಾಂಕ: 20/01/2010 ರ ಆದೇಶದಲ್ಲಿ ಸಮಿತಿಯನ್ನು ರಚಿಸಿದೆ. ಈ ಸಮಿತಿಯ ವರದಿ ಬಂದ ಮೇಲೆ ನೀರಿನ ಹಂಚಿಕೆಯ ಬಗ್ಗೆ ನಿರ್ಧರಿಸಲಾಗುವುದು.

ಶಿವಮೊಗ್ಗ ನಗರ ಮತ್ತು ಶಿವಮೊಗ್ಗ ಗ್ರಾಮಾಂತರದಲ್ಲಿ ತಾಲ್ಲೂಕು ಕಛೇರಿ ಪ್ರಾರಂಭಿಸುವುದು

46 (24) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರ ಮತ್ತು ಶಿವಮೊಗ್ಗ ಗ್ರಾಮಾಂತರ ಎಂದು ವಿಂಗಡಿಸಿರುವುದರಿಂದ 2 ತಾಲ್ಲೂಕುಗಳನ್ನಾಗಿ ರಚಿಸಿ, ತಹಶೀಲ್ದಾರ್